ಮೈಸೂರು ನಗರದ ಚಾಮುಂಡಿ ವಸತಿ ಗೃಹದ ಅವ್ಯವಸ್ಥೆ.

1015-ಶ್ರೀ ಕೆ.ಹರ್ಷಕುಮಾರ್ ಗೌಡ (ಚಾಮರಾಜ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿರುವ ಚಾಮುಂಡಿ ವಸತಿ ಗೃಹ ಹಾಳು ಬಿದ್ದಿದ್ದು ಅತ್ಯಂತ ನಿರ್ಲಕ್ಷಕ್ಕೊಳಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಇದರ ಕಾಮಗಾರಿ ಮತ್ತು ಉಸ್ತುವಾರಿ ಕಾರ್ಯಗಳಿಗಾಗಿ ಪ್ರತಿವರ್ಷ ಖರ್ಚು ಮಾಡುವ ಹಣವೆಷ್ಟು ಹಾಗೂ ಪ್ರಸಕ್ತ ಇರುವ ಸಿಬ್ಬಂದಿಯ ಸಂಖ್ಯೆ ಎಷ್ಟು?

ಇ) ಈ ಕಟ್ಟಡವನ್ನು ಸಂಪೂರ್ಣವಾಗಿ ಸುಧಾರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಎಸ್. ಬಂಗಾರಪ್ಪ, (ಮುಖ್ಯ ಮಂತ್ರಿಗಳು)

ಅ) ಇಲ್ಲ. ಸುಸ್ಥಿತಿಯಲ್ಲಿದ್ದು, ಈಗಲೂ ಉಪಯೋಗಿಸಲಾಗುತ್ತಿದೆ.

ಆ)

1. ದುರಸ್ತಿಗಾಗಿ ಪ್ರತಿವರ್ಷ ಖರ್ಚು ಮಾಡುತ್ತಿರುವ ಹಣ 12,600-00 ರೂಪಾಯಿಗಳು.
2. ಉಸ್ತುವಾರಿ ವೆಚ್ಚಕ್ಕಾಗಿ ಸರಾಸರಿ ವರ್ಷಕ್ಕೆ 1,12,225-00 ರೂ.ಗಳು.
3. ಪ್ರಸಕ್ತ ಇರುವ ಸಿಬ್ಬಂದಿ ಸಂಖ್ಯೆ : 14.

ಸಧ್ಯದಲ್ಲಿ ಚಾಮಂಡಿ ವಸತಿ ಗೃಹವನ್ನು ಪೂರ್ತಿಯಾಗಿ ನವೀಕರಣಗೊಳಿಸುವ ಪ್ರಸ್ತಾವನೆ ಇರುವುದಿಲ್ಲ.

ಇ) ಸಧ್ಯದಲ್ಲಿ ಚಾಮುಂಡಿ ವಸತಿ ಗೃಹವನ್ನು ಪೂರ್ತಿಯಾಗಿ ನವೀಕರಣಗೊಳಿಸುವ ಪ್ರಸ್ತಾವನೆ ಇರುವುದಿಲ್ಲ.

ಹುಬ್ಬಳ್ಳಿ ಬೈಪಾಸ್ ನಿರ್ಮಾಣ ಕಾರ್ಯದ ಪ್ರಗತಿ.

1040-ಶ್ರೀ ಪಿ.ಸಿ.ಸಿದ್ದನಗೌಡರ್ (ಕಲಘಟಗಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಬೈಪಾಸ್ ರಸ್ತೆಯ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ

ಆ) ಈ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರರಂಭಿಸಲಾಯಿತು, ಹಾಗೂ ಇಲ್ಲಿಯವರೆವಿಗೆ ಅದಕ್ಕಾಗಿ ವೆಚ್ಚವಾಗಿರುವ ಹಣವೆಷ್ಟು?

ಇ) ಈ ನಿರ್ಮಾಣ ಕಾರ್ಯ ಯಾವಾಗ ಮುಕ್ತಾಯಗೊಳ್ಳುವುದು?

ಶ್ರೀ ಎಸ್.ಬಂಗಾರಪ್ಪ, (ಮುಖ್ಯ ಮಂತ್ರಿಗಳು)

ಅ) 30 ಕಿ.ಮೀ.ಉದ್ದದ ಹುಬ್ಬಳ್ಳಿ ಬೈಪಾಸ್ ರಸ್ತೆ ಕೆಲಸವನ್ನು ಎರಡು ಹಂತಗಳಲ್ಲಿ ಮಾಡಲಾಗುವುದು. ಮೊದಲನೇ ಹಂತದ 17 ಕಿ.ಮೀ. ರಸ್ತೆಯ ಕೆಲಸ ಪ್ರಗತಿಯಲ್ಲಿದೆ.

ಆ) ಮೊದಲನೇ ಹಂತದ ಕೆಲಸ ಜುಲೈ 87ರಲ್ಲಿ ಪ್ರಾರಂಭವಾಗಿದೆ. ಇದಕ್ಕೆ ಈವರೆವಿಗೆ 252 ಲಕ್ಷ ರೂ.ಗಳು ಖರ್ಚಾಗಿದೆ.

ಇ) ಮೊದಲನೇ ಹಂತದ ಕೆಲಸವು 1991ರ ಅಂತ್ಯಕ್ಕೆ ಪೂರ್ಣಗೊಳ್ಳುವುದು.